<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

**ಓ.ಎಸ್ ಸಂಖ್ಯೆ.2933/2022** ಡಿ.ಡಬ್ಲೂ .1

ದಿನಾಂಕಃ 23-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದೂವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-

ನನ್ನ ತಾಯಿ 2008 ರಲ್ಲಿ ಗಣಗಳೂರು ಗ್ರಾಮದಲ್ಲಿ ಇದ್ದರು. 2008 ರಲ್ಲ್ ನನ್ನ ತಾಯಿ 3 ನೇ ಪ್ರತಿವಾದಿಯ ಮನೆಯಲ್ಲಿರು ಎಂದರೆ ಸರಿಯಲ್ಲ. ನನ್ನ ತಾಯಿಗೆ ವಾಸಿಯಾಗದ ಕ್ಯಾನ್ಸರ್ ಖಾಯಿಲೆ ಇದ್ದು, ಅದರಿಂದ ಅವರು ಮರಣ ಹೊಂದಿರುತ್ತಾರೆ ಎಂದರೆ ಹೌದು.ಮಾಗಡಿ ನರಸಿಂಹಪ್ಪನವರಿಗೆ ನಿಡಿ. 2 ರ ಅಡಿಯಲ್ಲಿ ಹಣ ನೀಡಿರುತ್ತೇನೆ ಎಂದು ಹೇಳಿದ್ದು, ಆ ಸಮಯದಲ್ಲಿ ನರಸಿಂಹಪ್ಪನವರ ಹೆಂಡತಿ ಮಕ್ಕಳು ಹಾಜರಿರಲಿಲ್ಲ. ಕ್ರಯ ಆದ ಸಮಯದಲ್ಲಿ ನರಸಿಂಹಪ್ಪನವರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನರಸಿಂಹಪ್ಪನವರಿಗೆ ಇನ್ನೊಬ್ಬರ ಸಹಾಯ ಇಲ್ಲದೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರ ಬರೆಯುವ ಸಮಯದಲ್ಲಿ ಬೇರೆ ದಾಖಲೆಗಳನ್ನು ಬರೆದುಕೊಟ್ಟಿರುತ್ತೀರಾ ಎಂದು ಕೇಳಿರುತ್ತೀರಾ ಎಂದರೆ ಇಲ್ಲ. ಒಂದು ವೇಳೆ ನರಸಿಂಹಪ್ಪನವರು ಬೇರೆ ದಾಖಲೆಗಳನ್ನು ಬರೆದುಕೊಟ್ಟಿದ್ದಲ್ಲಿ ಆ ಬಗ್ಗೆ ಕ್ರಯ ಪತ್ರದಲ್ಲಿ ಹೇಳಿ ಬರೆಸುತ್ತಿದ್ದರು ಎಂದರೆ ಗೊತ್ತಿಲ್ಲ. ವಿಲ್ ಬರೆದಿದ್ದಲ್ಲಿ ಆ ಬಗ್ಗೆ ಕ್ರಯ ಪತ್ರದ 2 ನೇ ಪುಟದಲ್ಲಿ ಹೇಳುತ್ತಿದ್ದರು ಎಂದರೆ ಗೊತ್ತಿಲ್ಲ. ನಿಡಿ. 2 ರ 2 ನೇ ಪುಟದ ಕೊನೆಯ ಸಾಲಿನಲ್ಲಿ ಈ ಪತ್ರಕ್ಕೆ ನನ್ನ ಹೆಣ್ಣು ಮಗಳ ಸಾಕ್ಷಿಯನ್ನು ಹಾಕಿಸಿಕೊಟ್ಟಿರುತ್ತೇನೆ ಎಂದು ಬರೆದಿರುತ್ತದೆ ಎಂದರೆ ಹೌದು. ನಿಡಿ. 2 ರಲ್ಲಿ ನರಸಿಂಹಪ್ಪನವರ ಹೆಣ್ಣು ಮಕ್ಕಳ ಸಹಿ ಇಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರ ಮತ್ತು ಲಿಖಿತ ಹೇಳಿಕೆಯಲ್ಲಿ ದಿನಾಂಕಃ 08-03-1996 ರ ದಾಖಲೆ ಬಗ್ಗೆ ಹೇಳಿದ್ದು, ಆ ರೀತಿಯ ಯಾವುದೇ ದಾಖಲೆ ಆಗಿಲ್ಲ ಎಂದರೆ ಗೊತ್ತಿಲ್ಲ.ಅದೇ ರೀತಿ ದಿನಾಂಕಃ 24-04-2006 ರಂದು ಯಾವುದೇ ಕ್ರಯ ಪತ್ರ ಆಗಿಲ್ಲ ಎಂದರೆ

ಸರಿಯಲ್ಲ. ಅದೇ ರೀತಿ ದಿನಾಂಕಃ 17-07-2008 ರಂದು ನನ್ನ ನನ್ನ ಪ್ರಮಾಣ ಪತ್ರ ಮತ್ತು ಲಿಖಿತ ಹೇಳಿಕೆಯಲ್ಲಿ ಹೇಳಿರುವಂತೆ ಯಾವುದೇ ದಾಖಲೆ ಆಗಿಲ್ಲ ಎಂದರೆ ಸುಳ್ಳು.

ದಾವಾ ಆಸ್ತಿ ಸುಮಾರು 7-8 ವರ್ಷಗಳಿಂದ ಬಿಳುಬಿದ್ದಿದ್ದು, ಯಾವುದೇ ಬೆಳೆ ಬೆಳೆದಿಲ್ಲ. ನಾನು 2011 ರಿಂದ ದಾವಾ ಆಸ್ತಿಯ ಮೇಲೆ ಬೆಳೆ ಸಾಲ ಪಡೆದಿದ್ದೇನೆ ಎಂದರೆ ಹೌದು. ಸದರಿ ಸಾಲವನ್ನು ಬೆಳೆ ಬೆಳೆಯಲು ಮತ್ತು ಅಭಿವೃದ್ಧಿ ಪಡಿಸಲು ನೀಡಿರುವ ಸಾಲ ಎಂದರೆ ಹೌದು. ನಾನು ಹಾಜರು ಮಾಡಿರುವ ಪಹಣಿಗಳಲ್ಲಿ ಬೆಳೆ ಬಗ್ಗೆ ಬರೆದಿಲ್ಲ ಎಂದರೆ ಹೌದು. ನಾನು ಸಲ್ಲಿಸಿರುವ ತಕರಾರಿನಲ್ಲಿರುವ ಸಹಿ ನನ್ನ ಹೆಂಡತಿ 5 ನೇ ಪ್ರತಿವಾದಿಯದ್ದೇ ಆಗಿರುತ್ತದೆ. ನಿಡಿ. 2 ರಲ್ಲಿರುವ 5 ನೇ ಪ್ರತಿವಾದಿಯ ಸಹಿ ಮತ್ತು ತಕರಾರಿನಲ್ಲಿರುವ ಸಹಿ ಬೇರೆ ಬೇರೆ ಇದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಅವರು ಆ ರೀತಿಯ ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಅವರು ಸುಮಾರು 7-8 ವರ್ಷಗಳಿಂದ ಸಹಿ ಮಾಡುತ್ತಿದ್ದಾರೆ. ನಿಡಿ. 2 ಮತ್ತು 34 ರಲ್ಲಿರುವ 5 ನೇ ಪ್ರತಿವಾದಿಯ ಸಹಿ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ನಿಡಿ. 2 ಕ್ಕೆ ಸಾಕ್ಷಿಯಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನೆನಪಿಲ್ಲ. ನಿಡಿ. 3 ರಲ್ಲಿ ಕ್ರಮವಾಗಿ ನಾನು ನನ್ನ ಹೆಂಡತಿ ಮತ್ತು ನನ್ನ ತಾಯಿಯ ಹೆಸರು ನಮೂದಾಗಿದ್ದು, ನನ್ನ ಹೆಂಡತಿಯ ಸಹಿ ನಂತರ ನನ್ನ ತಾಯಿಯ ಸಹಿ ನಮೂದಾಗಿರುತ್ತದೆ ಎಂದರೆ ಆ ರೀತಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಅವಸರ ಅವಸರದಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ನರಸಿಂಹಪ್ಪನವರ ಮಗ ಶ್ರೀನಿವಾಸ ರವರನ್ನು ಆತ ಚಿಕ್ಕ ಹುಡುಗನಾಗಿದ್ದಾನಿಂದಲೂ ನೋಡಿದ್ದೇನೆ. ಅವರು ಚಿಕ್ಕಬಳ್ಳಾಪುರದಲ್ಲಿ ವಾಸ ಇದ್ದಾರೆ. ನಾನು ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಬೇರೆ ಬೇರೆ ಸಹಿಗಳನ್ನು ಮಾಡಿ ಸಾಲ ಪಡೆದಿದ್ದೇನೆ ಎಂದರೆ ಸುಳ್ಳು. ನಿಡಿ. 2 ಮತ್ತು 3 ರ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ನರಸಿಂಹಪ್ಪನವರು ಎಂದು ಸಹ ನೊಂದಣಿ ಕಛೇರಿಗೆ ಬಂದು ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. ಈಗ 1, 3 ಮತ್ತು 4 ನೇ ಪ್ರತಿವಾದಿಗಳು ಹೊಸಕೋಟೆಯಲ್ಲಿ ಬಾಡಿಗೆ ಮನೆಯಲ್ಲಿ

ವಾಸವಾಗಿದ್ದಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ನಮ್ಮ ಕುಟುಂಬದಲ್ಲಿ ಇಲ್ಲದೇ ಇರುವ ಕಾರಣ ವಾದಿ 1/5 ನೇ ಹಿಸ್ಸಾ ಹಕ್ಕನ್ನು ಹೊಂದಿರುತ್ತಾರೆ ಎಂದರೆ ಸುಳ್ಳು. ಯಾವುದೇ ಸಹಿಗಳನ್ನು ಮಾಡುವಾಗ ಸದರಿ ದಾಖಲೆಯನ್ನು ಓದಿಸಿ ಮಾಡಿರುತ್ತಾರೆ ಎಂದರೆ ಹೌದು. ನರಸಿಂಹಪ್ಪನವರಿಗೆ ತಾಲ್ಲೂಕೂ ಕಛೇರಿ ಬಳಿ ಹಣ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ನನ್ನ ತಾಯಿ ಮತ್ತು 5 ನೇ ಪ್ರತಿವಾದಿ ಇದ್ದೇವು. ನಿಡಿ. 2 ಮತ್ತು 3 ನ್ನು ಶರ್ಮ ಎಂಬುವವರು ಬರೆದಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.